ಕೆಲಸ ಬಿಟ್ಟು ಕಂಡ ಕಂಡ ಕಡೆಯೆಲ್ಲ ಸಾಲ ಸೋಲ ಮಾಡಿಕೊಂಡು ಕೆಲಸ ಬಿಡೋದು, ಹೆಂಡತಿಯನ್ನು ನಿರ್ಲಕ್ಷಿಸೋದು, ಮನೆ ಬಾಡಿಗೆ ಕಟ್ಟದೇ ಇರೋದು, ಸಂಸಾರ ಬೀದಿಗೆ ಬರೋದಕ್ಕೆ ಏನೇನು ಬೇಕೋ ಎಲ್ಲಾ ಮಾಡುತ್ತಿದ್ದರು. ಶಂಕರಪ್ಪನ ಹುಚ್ಚಾಟಗಳಿಗೆ ಪದ್ದಮ್ಮನ ಒಡವೆಗಳಿಗೆಲ್ಲ ಗಿರವಿ ಅಂಗಡಿಗೆ, ತವರು ಮನೆ – ಅತ್ತೆ ಮನೆಯ ರೀತಿ ಬದಲಾಗ್ತಿದ್ದವು. ಶಂಕರಪ್ಪನಿಗೆ ವಯಸ್ಸಾಗಿ ಒಂದು ಬೈಪಾಸ್ ಸರ್ಜರಿ ಆಗಿದ್ದಕ್ಕೆ ತುಸು ವ್ಯವಹಾರಗಳನ್ನು ಕಡಿಮೆ ಮಾಡಿದ್ದು ಮನೆಯವರಿಗೆ ನೆಮ್ಮದಿಯಾಗಿದ್ದರೂ, ಮತ್ತೆ ಮೊದಲಿನಷ್ಟಲ್ಲದಿದ್ದರೂ ಸಣ್ಣ ಪುಟ್ಟ ಕಿರಿಕಿರಿಗಳನ್ನು ಮಾಡ್ತಾ ಶಂಕರಪ್ಪ ಒಂದು ಸಣ್ಣ ಕೆಲಸಕ್ಕೂ ಹೋಗುತ್ತಿದ್ದರು. ಈ ಮಧ್ಯದಲ್ಲೂ ಪದ್ದಮ್ಮ ಅಕ್ಕ-ತಂಗಿಯರ ಮಕ್ಕಳನ್ನು ಓದಿಸೋದು, ಸಾಕೋದು, ಕೆಲಸವಿಲ್ಲದ ಅಣ್ಣ – ತಮ್ಮಂದಿರಿಗೆ ಮನೆಯಲ್ಲಿ ಆಶ್ರಯ ಕೊಡೋದು ಎಲ್ಲವನ್ನೂ ಮಾಡ್ತಾ ಒಂಥರಾ ಸಂಧ್ಯಾರಾಗ ಸಿನಿಮಾದ ಲಕ್ಷ್ಮೀದೇವಮ್ಮನ ಹಾಗೆ ಕಾಣಿಸೋಕೆ ಶುರುವಾಗಿದ್ದರು. ಹೇಗೋ, ಸೂರ್ಯನ ದುಡಿಮೆಯ ಮೇಲೆ ಮನೆ ನಿಂತಿದ್ದಕ್ಕೆ ಪದ್ದಮ್ಮನಿಗೆ ನಿರಾಳವಾಗಿತ್ತು. ಕುಸುಮಾಳಿಗೂ ಶಂಕರಪ್ಪನ ಸಾಲಗಳ ಮಧ್ಯೆ ಹೇಗೋ ಮದುವೆ ಮಾಡಿ ಒಳ್ಳೆ ಕಡೆ ಕಳಿಸಿದೆ ಎನ್ನುವುದು ಪದ್ದಮ್ಮನಿಗೆ ಇನ್ನೇನೂ ಚಿಂತೆಯಿಲ್ಲ, ಮಕ್ಕಳು ಮೊಮ್ಮಕ್ಕಳನ್ನು ನೋಡ್ತಾ ಕಾಲ ಕಳೆಯೋದಷ್ಟೇ ಅನ್ನುವ ಹಾಗೆ ಮಾಡಿತ್ತು.

ಜಾನು ಬಂದಮೇಲಂತೂ ಪದ್ದಮ್ಮನಿಗೆ ಕುಸುಮಾಗಿಂತ ಹತ್ತಿರವಾಗಿದ್ದಳು. ಅಮ್ಮಾ ಅಮ್ಮಾ ಎನ್ನುತ್ತಾ ಹಿಂದೆ ಸುತ್ತುತ್ತಾ, ಅವರ ಜೊತೆ ಅಡುಗೆ, ಸಿನಿಮಾ, ಐಸ್ಕ್ರೀಂ ಎನ್ನುತ್ತಾ ಹಚ್ಚಿಕೊಂಡಿದ್ದಳು. ಅವಳ ದುಡಿಮೆಯೂ ಸೇರಿದ ಮೇಲೆ ಮನೆಯಲ್ಲಿ ನೆಮ್ಮದಿಯ ಜೊತೆಗೆ ಆಗಾಗ ಹಬ್ಬ – ಹರಿದಿನಕ್ಕೆ ಜಾನು ಮರೆಯದೇ ಸೀರೆ ಕೊಡಿಸ್ತಾ ಇದ್ದದ್ದು ಪದ್ದಮ್ಮನಿಗೆ ಇನ್ನೂ ಸಂತೃಪ್ತಿ ತಂದಿತ್ತು.

ಸೊಸೆ ಜಾಸ್ತಿ ಓದಿದ್ದಾಳೆ ಎನ್ನುವ ಭಾವನೆ ಇದ್ದುದರಿಂದ ಆಸ್ಪತ್ರೆಯಲ್ಲಿ ಏನೇ ಹೇಳಿದರೂ ಆಕೆ ಅದನ್ನ ವಿವರಿಸಿ ಹೇಳಬೇಕಿತ್ತು ಪದ್ದಮ್ಮನಿಗೆ. ಅವಳು ಹೇಳಿದರೆ ಮಾತ್ರ ನಂಬೋ ಹಾಗಾಗಿದ್ದರು ಪದ್ದಮ್ಮ. ಆದರೂ ಇತ್ತೀಚೆಗೆ ಹಟ ಶುರುವಾಗಿತ್ತು. ಶ್ವಾಸಕೋಶಕ್ಕೆ ಶಕ್ತಿ ಬರಲಿ ಅಂತ ಊದುಕೊಳವೆ ಕೊಟ್ಟರೆ ಅದೆಲ್ಲ ಊದಲ್ಲ ಅಂತ ಹಠ ಹಿಡಿತಾ ಇದ್ದರು. ಸ್ವಲ್ಪ ಬಿಸಿಲಿಗೆ ಕೂತ್ಕೊ ಅಂದರೆ, 'ಅದೇನದು ವಯಸ್ಸಾದ ಮುದುಕೀರ ಹಾಗೆ ನಾನು ಕೂರೋದು' ಅಂತ ಮೊಂಡು ಹಿಡೀತಾ ಇದ್ದರು. ಶಂಕರಪ್ಪನ ವ್ಯವಹಾರಗಳಿಂದಾಗಿ ಸೂರ್ಯ ಅಪ್ಪನ ಜೊತೆಗೆ ಮಾತು ಬಿಟ್ಟಿದ್ದರೂ ಪದ್ದಮ್ಮನಿಗೋಸ್ಕರ ಆದಷ್ಟೂ ತಾಳ್ಮೆಯಿಂದ ಶಂಕರಪ್ಪನಿಗೆ ತಾಯಿಯನ್ನು ಪ್ರತಿ ದಿನ ಬಿಸಿಲಲ್ಲಿ ಕರೆದುಕೊಂಡು ಹೋಗೋದು, ವಾಕ್ ಮಾಡಿಸೋದು ಮಾಡಲು ನೆನಪಿಸ್ತಾ ಇದ್ದ.

ಆಸ್ಪತ್ರೆಗೆ ಅಡ್ಮಿಟ್ ಆಗುವ ಹಿಂದಿನ ದಿನ ರಾತ್ರಿಯೆಲ್ಲ ಪದ್ದಮ್ಮ ಒದ್ದಾಡಿದ್ದರು. ಇದು ಮೊದಲನೇ ಸಲ ಏನಲ್ಲ. ಪ್ರತಿ ಬಾರಿ ಯಾವಾಗಲೋ ಆಸೆ ಪಟ್ಟು ಮಗ ಸೊಸೆ ಮನೆಯಲ್ಲಿ ಇಲ್ಲದೇ ಇದ್ದಾಗ ಸ್ವಲ್ಪ ಖಾರ ತಿನ್ನೋದು, ರಾತ್ರಿ ಅಸಿಡಿಟಿಗೆ ಒದ್ದಾಡೋದು ನಡೆಯುತ್ತಲೇ ಇತ್ತು. ಜಾನು ಆಫೀಸಲ್ಲಿದ್ದಾಗಲೇ ಮಗ, 'ಅಮ್ಮಾ, ಅಜ್ಜಿ ಅಳ್ತಿದೆ ಅವಾಗಿಂದ' ಎಂದು ಕಾಲ್ ಮಾಡಿದ್ದ.

ಜಾನು, ಸೂರ್ಯ ಮನೆಗೆ ಬಂದು ಪದ್ದಮ್ಮನಿಗೆ ನೀರು ಕುಡಿಸಿ, ಗ್ಯಾಸ್ಟ್ರಿಕ್ ಮಾತ್ರೆ ನುಂಗಿಸಿ ಏನೇನು ಮಾಡಿದರೂ ಪದ್ದಮ್ಮನ ಒದ್ದಾಟ ನಿಂತಿರಲಿಲ್ಲ. ಸೂರ್ಯನ ಕೈ ಹಿಡ್ಕೊಂಡು ನನ್ನ ಆಸ್ಪತ್ರೆಗೆ ಕರ್ಕೊಂಡು ಹೋಗು ಎಂದು ಹಠ ಮಾಡಲು ಶುರು ಮಾಡಿದ್ದರು. ಪ್ರತಿ ಸಲ ಇದೇ ಮಾಡ್ತೀಯ ಅಮ್ಮಾ ಎಂದು ಗೊಣಗಿದ ಸೂರ್ಯ ಆಸ್ಪತ್ರೆಗೆ ಸೇರಿಸಿದ್ದ. ಯಾಕೋ ಏನೋ ಪದ್ದಮ್ಮ ಕಾರಲ್ಲಿ ಜಾನುವಿನ ಕೈ ಹಿಡ್ಕೊಂಡು, 'ನಂಗೇನಾದ್ರೂ ಆದರೆ ನೀನು ನಿಮ್ಮ ತಾಯಿ ಮನೆಗೆ ಹೋಗ್ಬಿಡು, ಇಲ್ಲ ಅಂದ್ರೆ ಎಲ್ಲರೂ ನಿಂಗೆ ಪೀಡಿಸ್ತಾರೆ' ಅಂದಿದ್ದರು.

'ನೀವು ಸುಮ್ನಿರಿ ಅಮ್ಮ, ಏನೂ ಆಗಲ್ಲ' ಎಂದ ಜಾನು ಸೂರ್ಯನಿಗೆ, 'ಕುಸುಮಾಗೆ ಬರೋಕೆ ಹೇಳು' ಎಂದು ನೆನಪಿಸಿದ್ದಳು.

ಆಸ್ಪತ್ರೆಯಲ್ಲಿ ಚೆಕಪ್ ಮಾಡಿ, ಹಾಕಿ ಶುಗರ್ ಲೆವೆಲ್ ತುಂಬಾ ಡೌನಾಗಿದೆ ಎಂದು ಡ್ರಿಪ್ಸ್ ಹಾಕಲು ಪ್ರಯತ್ನಿಸಿದ್ದರು. ಪದ್ದಮ್ಮನ ಸೊರಗಿದ ಸಣ್ಣ ದೇಹಕ್ಕೆ ಎಲ್ಲೂ ನರವೇ ಸಿಗದೇ ಕೊನೆಗೆ ಐಸಿಯುಗೇ ಶಿಫ್ಟ್ ಮಾಡಬೇಕಾಯಿತು. ಏನೇನೋ ಟ್ರೀಟ್‌ಮೆಂಟ್ ಅದು ಇದು ಎಂದು ಓಡಾಡುವ ಹೊತ್ತಲ್ಲೇ ಸಂಜೆಗೆ ಇದ್ದಕ್ಕಿದ್ದ ಹಾಗೆ ಡಾಕ್ಟರ್, ನರ್ಸ್‌ಗಳು ಪದ್ದಮ್ಮನಿಗೆ ಕಾರ್ಡಿಯಾಕ್